# ಮಕ್ಕಳಿಗಾಗಿ ಬೈಬಲ್

ಅರ್ಪಿಸುವ



ದೇವಾಲಯದ
ಧರ್ಮಾಧಿಕಾರಿ
ಯೇಸುವನ್ನು
ಸಂಧಿಸಿದನು

ಬರಹಗಾರರು: Edward Hughes

ಚಿತ್ರಲೇಖಕರು: Byron Unger; Lazarus

ಅಳವಡಿಸುವವರು: M. Maillot; Sarah S.

ಪದ್ಮಾ ಸೈಲೇಸ್: Vinay Shirol

ತಯಾರಕರು: Bible for Children
www.M1914.org

©2014 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.

ಯೇಸು ಒಂದು ದಿವಸ ದೇವಾಲಯಕ್ಕೆ ಹೋದನು ಅಲ್ಲಿ ಜನರು ದೇವಾಲವನ್ನು ಕಡೆಗಣಿಸಿ ದನ ಕುರಿಯ ವ್ಯಾಪಾರವನ್ನು, ಹಣದ ವಿನೀಮಯವನ್ನು ದೇವಾಲಯದಲ್ಲೆ ಮಾಡುತ್ತಿದ್ದರು.



ಹುರಿಯಿಂದ ಒಂದು ಚಾವಟಿಯನ್ನು ಮಾಡಿ, ಅಲ್ಲಿ ವ್ಯಾಪಾರ ಮಾಡುತ್ತಿದ್ದವರನ್ನು ಯೇಸು ಓಡಿಸಿದನು. "ಈ ವಸ್ತುಗಳನ್ನು ತೆಗೆದುಕೊಂಡು ಹೋಗಿರಿ" ನನ್ನ ತಂದೆಯ ಮನೆಯನ್ನು ವ್ಯಾಪಾರದ ಸ್ಥಳವನ್ನಾಗಿ ಮಾಡಿದ್ದಿರಿ ಎಂದು ಹೇಳಿದನು. ಯೇಸು ತನ್ನ ತಂದೆಯ ಮನೆಯನ್ನು ಪ್ರೀತಿಸಿದನು.





ಅಲ್ಲಿದ್ದ ಧರ್ಮನಾಯಕರು
ಯೇಸು ದೇವಾಲಯವನ್ನು
ಖಾಲಿ ಮಾಡಿದ್ದರಿಂದ,
ಆತನಿಗೆ ಅಧಿಕಾರ
ಇದೇಯೂ? ಎಂದು
ತಿಳಿದುಕೊಳ್ಳಲು
ಆತನಿಂದ ಒಂದು ಸೂಚಕ
ಕಾರ್ಯವನ್ನು ನಡೆಸಲು
ಕೇಳಿಕೊಂಡರು, ಆಗ ಯೇಸು
"ಈ ದೇವಾಲಯವನ್ನು
ಕೆಡವಿ, ನಾನು ಇದನ್ನು
ಮೂರು ದಿವಸದಲ್ಲಿ
ಮತ್ತೆ ನಿಲ್ಲಿಸುವೆನು."



ಎಂದು ಹೇಳಿದನು
ಇದು ಅಸಾಧ್ಯ.
ಯಾಕೆಂದರೆ ಈ
ದೇವಾಲಯವನ್ನು
ಕಟ್ಟಲು **46** ವರ್ಷ
ತೆಗೆದುಕೊಂಡಿತ್ತು.

ಆದರೆ ಯೇಸು ತನ್ನ ದೇಹದ ಬಗ್ಗೆ ಈ ಮಾತನ್ನು
ಹೇಳಿದನು. ದೇವಾಲಯದ ಹಾಗೆ ಆತನ
ದೇಹವು ಸಹ ದೇವರ ವಾಸಸ್ಥಳವಾಗಿತ್ತು.
ಯೇಸು ಶಿಲುಬೆಯ ಮೇಲೆ ಸತ್ತು
ಮೂರನೆಯ ದಿವಸದಲ್ಲಿ ದೇವರು
ಅವನ್ನು ಎಬ್ಬಿಸುವನೆಂದು
ಅವನಿಗೆ ತಿಳಿದಿತ್ತು.





ಆ ರಾತ್ರಿ, ದೇವಾಲಯದ ಒಬ್ಬ ನಾಯಕನು ಯೇಸುವನ್ನು ನೋಡಲು ಬಂದನು. ಆತನು ಮಾಡುವ ಅದ್ಭುತ ಕಾರ್ಯಗಳಿಂದ ದೇವರೆ ಈತನನ್ನು ಕಳುಹಿಸಿದ್ದಾನೆ ಎಂದು ತಿಳಿದುಕೊಂಡಿದ್ದನು. ನೀಕೋದೆಮನು, ಯೇಸುವಿನಿಂದ ಇನ್ನೂ ಹೆಚ್ಚಾಗಿ ಕಲಿಯಲು ಬಂದನು.



ಯೇಸು ಆತನಗೆ,
ಜನರು ದೇವರು
ರಾಜ್ಯಕ್ಕೆ ಸೇರಬೇಕಾದರೆ
ಮೂದಲು ಹೊಸದಾಗಿ
ಹುಟ್ಟಬೇಕು ಎಂದು
ಹೇಳಿದನು. ಆದರೆ
ಈ ಮಾತು
ನೀಕೋದೆಮನಿಗೆ
ಅರ್ಥವಾಗಲಿಲ್ಲ.
ಮುದುಕನಾದವನು
ಮತ್ತೆ ಮಗುವಾಗಲು
ಸಾಧ್ಯವೇ?



ಅದರಲ್ಲಿಯೂ
ನೀಕೋದೆಮನು
ದೇವಾಲಯದ
ನಾಯಕನಾಗಿದ್ದನು.
ಇಷ್ಟಿದ್ದರೂ
ದೇವರ ರಾಜ್ಯಕ್ಕೆ
ಸೇರಲಾಗುವುದಿಲ್ಲವಾ?



"ದೇಹದಿಂದ ಹುಟ್ಟಿದ್ದು
ದೇಹವೇ, ಆತ್ಮನಿಂದ
ಹುಟ್ಟಿದ್ದು: ದೇವರ
ಆತ್ಮವು ಗಾಳಿಯಿದ್ದಂತೆ,
ಜನರು ಅದನ್ನು
ನೋಡಲಾಗುವುದಿಲ್ಲ
ಆದರೆ ಆ ಗಾಳಿ ಏನನ್ನು
ಮಾಡುತ್ತೆ ಅನ್ನುವುದನ್ನು
ಮಾತ್ರ ನೋಡಲು
ಸಾಧ್ಯ."



ಇಸ್ರಾಯಿಲನ ಮಕ್ಕಳು ಮೋಶೆಗೆ "ನಮಗೆ ಆಹಾರವಿಲ್ಲ, ನೀರಿಲ್ಲ ಮತ್ತು ದೇವರು ಕೊಟ್ಟಂತ ಆಹಾರ ನಮಗೆ ಇಷ್ಟವಾಗತ್ತಿಲ್ಲ" ಎಂದು ಮೊರೆಯಿಟ್ಟದ್ದನ್ನು ಯೇಸು ನೀಕೋದೆಮನಿಗೆ ನೆನಪಿಸಿದನು.

ಜನರ ಶಾಪಗಳು ದೇವರನ್ನು
ಕೋಪಗೋಳಿಸಿದವು. ದೇವರು
ಅವರ ಮಧ್ಯದಲ್ಲಿ ವಿಷಸರ್ಪಗಳನ್ನು
ಕಳುಹಿಸಲಾಗಿ, ಅನೇಕ ಜನರು ಅದರ
ಕಡಿತದಿಂದ ಸತ್ತರು.



"ನಾವು ಪಾಪಮಾಡಿದ್ದೇವೆ ಈ ವಿಷಸರ್ಪಗಳನ್ನು ತೆಗೆದು ಹಾಕುವಂತೆವಂತೆ ನಮಗಾಗಿ ದೇವರಲ್ಲಿ ಪ್ರಾರ್ಥಿಸು" ಎಂದು ಜನರು ಮೋಶೆಗೆ ಬೇಡಿಕೊಂಡರು, ಆಗ ಮೋಶೆ ಪ್ರಾರ್ಥಿಸಿದನು – ಆದರೆ ದೇವರು ವಿಷ ಸರ್ಪಗಳನ್ನು ತೆಗೆಯಲಿಲ್ಲ.





ದೇವರು ಮೋಶೆಗೆ ವಿಷಸರ್ಪದ ಆಕಾರವನ್ನು ಮಾಡಿಸಿ ಧ್ವಜಸ್ಥಂಬದ ಮೇಲೆ ಎತ್ತಿ ನಿಲ್ಲಿಸಲು ಹೇಳಿದನು, "ಸರ್ಪಗಳಿಂದ ಗಾಯಪಟ್ಟವರಲ್ಲಿ ಯಾರುರು ಆ ತಾಮ್ರದ ಸರ್ಪವನ್ನು ಲಕ್ಷವಿಟ್ಟು ನೋಡಿದರೋ ಅವರೆಲ್ಲರೂ ಬದುಕುವರು" ಎಂದು ದೇವರು ಪ್ರಮಾಣ ಮಾಡಿದನು.



ಮೋಶೆಯು, ದೇವರು ಹೇಳಿದ
ಹಾಗೆ ತಾಮ್ರದ ಸರ್ಪವನ್ನು ಮಾಡಿ
ನಿಲ್ಲಿಸಿದಾಗ ನೋಡಿದವರೆಲ್ಲರೂ
ಗುಣ ಹೊಂದಿದರು.


ಯೇಸು ನೀಕೋಧೆಮನಿಗೆ ದೇವರ
ಮನುಷ್ಯನು ಸಹ ತಾಮ್ರದ
ಸರ್ಪದ ಹಾಗೆ
ಎತ್ತಲ್ಪಡುವನು
ಎಂಬುವುದಾಗಿ
ಹೇಳಿದನು.


ಯೇಸು ಶಿಲುಬೆಯ ಕುರಿತಾಗಿ
ಮಾತಾಡಿದನು– ಅಂದರೆ
ಅದರ ಮೇಲೆ
ಪಾಪಗಳಿಗೋಸ್ಕರ
ಸಾಯುವುದನ್ನು
ಹೇಳಿದನು.


ಯೇಸು ಹೇಳಿದ್ದು
"ದೇವರು ಲೋಕದ ಮೇಲೆ ಎಷ್ಟೋ
ಪ್ರೀತಿಯನ್ನಿಟ್ಟು ತನ್ನ ಒಬ್ಬನೇ ಮಗನನ್ನು
ಕೊಟ್ಟನು ಆತನನ್ನು ನಂಬುವವನು
ಒಬ್ಬನಾದರು ನಾಶವಾಗದೆ
ಎಲ್ಲರೂ ನಿತ್ಯ ಜೀವ
ಪಡೆಯಬೇಕೆಂದು
ಆತನನ್ನು ಕೊಟ್ಟನು".


ಅಂದರೆ ಅದರ ಅರ್ಥ
ಯಾರಾರು ಯೇಸುವನ್ನು
ನಂಬುತ್ತಾರೋ ಅವರು
ದೇವರ ಕುಟುಂಬಕ್ಕೆ
ಸೇರಿದವರಾದರು.

ನೀಕೊದೇಮನು ಆ ರಾತ್ರಿ ಯೇಸು ಸ್ವಾಮಿಯ ಶಿಷ್ಯನಾಗಲಿಲ್ಲ. ಆದರೆ ಅನೇಕ ವರ್ಷಗಳ ನಂತರ, ಶಿಲುಬೆಗೆರಿಸಿದ ಯೇಸುವಿನ ಅಂತ್ಯಕ್ರಿಯೆಯಲ್ಲಿ ಸಹಾಯ ಮಾಡಿದ್ದರಿಂದ ನೀಕೊದೇಮನು ಯೇಸುವನ್ನು ನಂಬಿದನು ಮತ್ತು ಪ್ರೀತಿಸಿದನು ಎಂಬುವುದಾಗಿ ಇದರಿಂದ ತಿಳಿದುಬರುತ್ತದೆ.



ಇದಾದ ನಂತರ, ಯೇಸು ತನ್ನ ಶಿಷ್ಯರೊಂದಿಗೆ ಉತ್ತರಕ್ಕೆ ಪ್ರಯಾಣ ಬೆಳೆಸಿದನು, ಅನೇಕ ಜನರು ದೇವರ ರಾಜ್ಯದ ಕುರಿತಾಗಿ ಕೇಳಿ, ದೇವರ ಮಗನಾದ ನಜರೇತಿನ ಯೇಸುವನ್ನು ನಂಬುವ ಅವಕಾಶ ಕೊಡಲ್ಪಟ್ಟಿತು.



ದೇವಾಲಯದ ಧರ್ಮಾಧಿಕಾರಿ ಯೇಸುವನ್ನು ಸಂಧಿಸಿದನು

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

ಯೋಹಾನ 2–3, ಅರಣ್ಯಕಾಂಡ 21

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

ಮುಕ್ತಾಯ

ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
ಯೋಹಾನ 3:16